ಶ್ರೀ ಎಂ ಬಿ. ರಾಮಸ್ವಾಮಿ :—ಈ ಸಂಬಂಧದಲ್ಲಿ ಎಷ್ಟು ಕಾಲೇಜುಗಳ ಬಗ್ಗೆ ದೂರು ಬಂದಿದೆ? ಬಂದಿದ್ದರೆ ಏನು ಕ್ರಮ ತೆಗೆದುಕೊಳ್ಳಲಾಗಿದೆ.?

ಶ್ರೀ ಎ. ಆರ್. ಬದರಿನಾರಾಯಣ್ :— ದೂರು ಬಂದಿಲ್ಲ. ಅವರು ವಸೂಲು ಮಾಡುತ್ತಿದ್ದಾರೆ. ರೂಲ್ಸ್ ಪ್ರಕಾರ ನಡೆದುಕೊಳ್ಳುತ್ತಿದ್ದಾರೆ ಎಂದು ನಂಬಿದ್ದೇವೆ. ಹಾಗೆ ಮಾಡದಿದ್ದರೆ ಸೂಕ್ತ ಕ್ರಮ ಕೈಕೊಳ್ಳುತ್ತೇವೆ

DISTRIBUTION OF FOREST LAND IN NORTH KANARA DISTRICT.

58. SMT. RADHA BHATT (Ankola).—

Will the Minister for Revenue be pleased to state :—

(*a*) the number of acres of land which has been transferred from the Forest Department to Revenue Department in North Kanara District :

(*b*) whether the said land has been distributed among the eligible farmers ;

(*c*) if not, the reasons for the same ?

SRI N. HUTCHAMASTHY GOWDA.—(Minister for Revenue)

(*a*) 29314-0-0

(*b*) 18113-0-0 acres of land is distributed

(*c*) the distribution of forest land is withheld as per Government Order.

ಶ್ರೀಮತಿ ರಾಧಾ ಭಟ್: ಜಮೀನನ್ನು ಆತುರವಾಗಿ ಹಂಚಿದ್ದಾರೆ. ಅನೇಕರಿಗೆ ಸಾಕಾದಷ್ಟು ಜಮೀನಿದ್ದರೂ ಅರಣ್ಯ ಇಲಾಖೆಯಿಂದ ಬಿಡುಗಡೆ ಮಾಡಿದ ಜಮೀನನ್ನು ಹಂಚಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎನ್, ಹುಚ್ಚಮಾಸ್ತಿಗೌಡ : ಆತುರಾತುರವಾಗಿ ಹಂಚುವುದು ಕಷ್ಟ. ಇದಕ್ಕೆ ಕೆಲವು ಕ್ರಮ ಅನುಸರಿಸಬೇಕು. ಆದುದರಿಂದ ನಿಧಾನವಾಗಿಯೇ ಹಂಚಿದ್ದಾರೆಂಬ ಭಾವನೆಯಿದೆ. ಜಮೀನಿರುವವರಿಗೆ ಅರಣ್ಯದ ಜಮೀನನ್ನು ಹಂಚಿದ್ದರೆ ಅದನ್ನು ವಜಾ ಮಾಡಲು ಪ್ರಯತ್ನಮಾಡುತ್ತೇವೆ.

ಶ್ರೀಮತಿ ರಾಧಾಭಟ್ : ಈಗಾಗಲೇ ವಿತರಣೆಯಾಗಿರುವ ಜಮೀನು ಯೋಗ್ಯರಾದ ರೈತರಿಗೆ ದೊರೆತಿದೆಯೇ ಎಂದು ಖಚಿತಮಾಡಿಕೊಳ್ಳಲು ಮತ್ತು ಜಮೀನು ಹಂಚಿಕೆಯಲ್ಲಿ ದುರುಪಯೋಗ ನಡೆದಿದೆಯೇ ಎಂಬುದನ್ನು ಕಂಡು ಹಿಡಿಯಲು ಕ್ರಮ ಕೈಗೊಳ್ಳುವಿರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ರೂಲ್ಸ್‌ಪ್ರಕಾರ ಹಂಚಬೇಕಾಗುತ್ತದೆ. ಇದಕ್ಕೆ ವಿರುದ್ಧವಾಗಿ ಹಂಚಿರುವುದು ಗಮನಕ್ಕೆ ಬಂದರೆ ಕ್ರಮ ತೆಗೆದುಕೊಳ್ಳಬಹುದು. ಕ್ರಮವಾಗಿ ಹಂಚಿರುವುದು ಗಮನಕ್ಕೆ ಬಂದಿದೆ. ಅಕ್ರಮವಾಗಿರುವುದಿದ್ದರೆ ಆದನ್ನು ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಯಾವ ಯಾವ ತಾಲ್ಲೂಕಿಗೆ ಎಷ್ಟು ಹಂಚಿದೆಯೆಂಬುದನ್ನು ಹೇಳುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ತಾಲ್ಲೂಕುವಾರು ಅಂಕಿಅಂಶವಿಲ್ಲ. ದಯವಿಟ್ಟು ಕ್ಷಮಿಸಬೇಕು.

ಶ್ರೀ ಎಂ. ಬಿ. ರಾಮಸ್ವಾಮಿ : ಹರಿಜನರಿಗೆ ಇದರಲ್ಲಿ ಶೇಕಡ 50 ಭಾಗ ಕೊಡಲಾಗಿದೆಯೇ ಇಲ್ಲದಿದ್ದರೆ ಅಷ್ಟನ್ನು ರಿಸರ್ವ ಮಾಡುವಿರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಜಮೀನು ಹಂಚಿಕೆ ನಿಯಮ ಅನುಸರಿಸಿ ಹಂಚಬೇಕು. ಅಕಸ್ಮಾತ್ ಅದರಂತೆ ಹಂಚದಿರುವ ಸಂದರ್ಭವಿರುವುದು ಗಮನಕ್ಕೆ ಬಂದರೆ ಸೂಕ್ತ ಕ್ರಮ ತೆಗೆದುಕೊಳ್ಳಬಹುದು. ಇದು ನಿನ್ನೆ ಮೊನ್ನೆ ಆಗಿರುವ ವಿಷಯವಲ್ಲ, 1969ರಿಂದ ಹಂಚಿಕೆಯಾಗಿದೆ. ಇತ್ತೀಚೆಗೆ ಹಂಚಿಕೆಯಾಗಿರುವುದರಲ್ಲಿ ಅಕ್ರಮವಿದ್ದರೆ ವಿಚಾರಿಸುತ್ತೇನೆ. ಜೊತೆಗೆ ಹರಿಜನ-ಗಿರಿಜನರಿಗೆ ಜಮೀನು ಕೊಡಬೇಕಾದ ಅವಶ್ಯಕತೆಯಿರುವುದರಿಂದ ಕೆಲವು ಭಾಗ ಅರಣ್ಯದಿಂದ ರಿಲೀಜ್ ಮಾಡಬೇಕಾಗಿದೆ. ಈ ಬಗ್ಗೆ ಅರಣ್ಯ ಇಲಾಖೆಗೆ ಮನವಿ ಸಲ್ಲಿಸಲಾಗಿದೆ.

ಶ್ರೀಮತಿ ರಾಧಾ ಭಟ್.—ಅರಣ್ಯ ಇಲಾಖೆಯಿಂದ ರೆವಿನ್ಯೂ ಇಲಾಖೆಗೆ ಬಿಡುಗಡೆ ಮಾಡಿದ್ದ ಜಮೀನನ್ನು ಪೂರ್ಣವಾಗಿ ಹಂಚದೆ ತಡೆಹಿಡಿದಿರುವುದನ್ನು ಮತ್ತೆ ಹಂಚಲಾಗುವುದೇ ? ಇದನ್ನು ಮತ್ತೆ ವಿಚಾರ ಮಾಡುವಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ —19-7-1972ಕ್ಕೆ ಮುಂಚೆ 10546 ಎಕರೆ 22 ಗುಂಟೆ ಜಮೀನನ್ನು ರೈತರಿಗೆ ಹಂಚಿದೆ. ಆದರೆ ಅವರಿಗೆ ಸ್ವಾಧೀನಕ್ಕೆ ಕೊಡುವುದಕ್ಕೆ ಮುಂಚೆ 19-7-1972ರಲ್ಲಿ ಆಜ್ಞೆ ಮಾಡಿರುವಂತೆ ಕೊಡದಂತೆ

(ಶ್ರೀ ಎನ್. ಹುಚ್ಚೇಮಾಸ್ತಿಗೌಡ)

ಅರಣ್ಯ ಇಲಾಖೆ ಆಜ್ಞೆ ಮಾಡಿದೆ. ಆ ಮೇಲೆ ರೈತರಿಗೆ ವಿತರಣೆ ಆಗಿರುವುದನ್ನು ಪುನಃ ವಾಪಾಸು ಪಡೆಯಬೇಕೆಂದು 21-12-1972ರಲ್ಲಿ ಮತ್ತೊಂದು ಆಜ್ಞೆ ಯಾಗಿದೆ. ಜಮೀನು ಯಾರಿಗೆ ಕೊಟ್ಟಿದೆ ಅವರು ವಾಪಾಸು ಕೊಡಬೇಕೆಂದು ಆಜ್ಞೆಯಾಗಿದೆ. ಈಕೆ ರೆವಿನ್ಯೂ ಇಲಾಖೆಗೆ ತೆಗೆದುಕೊಂಡು ಮೊದಲು ಮಂಜೂರು ಮಾಡಿರುವವರಿಗೆ ಕೊಡಲು ಆಜ್ಞೆಯಾಗಿದೆ.

LAND ARMY SCHEME

72. Sri B. G. BANAKAR : —(Hirekerur).—

Will the Minister for Community Development and Social Welfare be pleased to state:—

(*a*) the names of places wherein the Land Army Scheme is working in the State;

(*b*) the total amount spent on this Land Army Scheme during the last 3 years;

(*c*) the types of works undertaken by this Land Army;

(*d*) the number of persons engaged or employed in these places;

(*e*) whether there is any proposal before Government to close this scheme?

SRI M. MALLIKARJUNASWAMY : —(Minister for Community Development and Social Welfare).

(*a*) Names of Land Army Projects and their places are indicated in the Statement appended.